30

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 10/9/2020

# ಉಪ ಸಭಾಪತಿ ಸ್ಥಾನಕ್ಕೆ ಹರಿವಂಶ್ ನಾಮಪತ್ರ

**ಹೊಸದಿಲ್ಲಿ:** ಜೆಡಿಯು ಸಂಸದ ಹರಿವಂಶ್ ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಯಾಗಿ ರಾಜ್ಯಸಭೆ ಉಪ ಸಭಾಪತಿ ಸ್ಥಾನಕ್ಕಾಗಿ ಬುಧವಾರ ನಾಮಪತ್ರ ಸಲ್ಲಿಸಿದ್ದಾರೆ.



ರಾಜ್ಯಸಭಾ ಮುಖಂಡ ತಾವರ್‌ಚಾಂದ್ ಗೆಹ್ಲೋಟ್ ಮತ್ತು ಎನ್‌ಡಿಎ ಮಿತ್ರಪಕ್ಷ ಎಸ್‌ಎಡಿ ಮುಖಂಡ ನರೇಶ್ ಗುಜ್ರಾಲ್ ಅವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಕೆ ಮಾಡಿದರು. ಸೆ.7ರಂದು ನಾಮಪತ್ರ ಸಲ್ಲಿಕೆ ಆರಂಭಗೊಂಡಿದ್ದು, ಸೆ.11ಕ್ಕೆ ಅಂತ್ಯಗೊಳ್ಳಲಿದೆ. ಈ ಬಾರಿಯೂ ಹರಿವಂಶ್ ಅವರೇ ಪುನರಾಯ್ಕೆಯಾಗುವ ಸಾಧ್ಯತೆಗಳೂ ನಿಚ್ಚಳವಾಗಿವೆ.

**ಬಿಜೆಪಿ ವಿಪ್:** ಕೋವಿಡ್ ಬಿಕ್ಕಟ್ಟಿನ ನಡುವೆ ಆರಂಭಗೊಳ್ಳಲಿರುವ ಸಂಸತ್ ಅಧಿವೇಶನವು ಅತ್ಯಂತ ಮಹತ್ವದ್ದಾಗಿದ್ದು ಯಾರೂ ಸದನ ತಪ್ಪಿಸಿಕೊಳ್ಳಬಾರದು ಎಂದು ಸೂಚಿಸಿ ಬಿಜೆಪಿ ತನ್ನ ಸದಸ್ಯರಿಗೆ ವಿಪ್ ಜಾರಿ ಮಾಡಿದೆ.